## ಕರ್ನಾಟಕ ಸರ್ಕಾರದ ನಡವಳಿಗಳು

### ವಿಷಯ: ನಿವೃತ್ತಿ ವೇತನ ಸೌಲಭ್ಯಗಳ ಪರಿಷ್ಕರಣೆ

### ಸರ್ಕಾರಿ ಆದೇಶ ಸಂಖ್ಯೆ: ಆಇ 33 ಪಿಇಎನ್ 2018, ಬೆಂಗಳೂರು, ದಿನಾಂಕ : 24.04.2018

ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 22 ಎಸ್‌ಆರ್‌ಪಿ 2017 ದಿನಾಂಕ: 01.06.2017ರಲ್ಲಿ ರಚಿಸಲಾಗಿದ್ದ 6ನೇ ರಾಜ್ಯ ವೇತನ ಆಯೋಗ ತನ್ನ ವರದಿಯನ್ನು ದಿನಾಂಕ: 31.01.2018ರಂದು ಸಲ್ಲಿಸಿದೆ.

2. 6ನೇ ರಾಜ್ಯ ವೇತನ ಆಯೋಗವು ಮಾಡಲಾಗಿರುವ ಶಿಫಾರಸ್ಸುಗಳನ್ನು ಸರ್ಕಾರವು ಆದೇಶ ಸಂಖ್ಯೆ: ಆಇ 06 ಎಸ್‌ಆರ್‌ಪಿ 2018 ದಿನಾಂಕ:01.03.2018ರಲ್ಲಿ ಒಪ್ಪಿಕೊಂಡಿರುವ ಹಿನ್ನೆಲೆಯಲ್ಲಿ, ನಿವೃತ್ತಿ ವೇತನ ಸೌಲಭ್ಯಗಳ ಪರಿಷ್ಕರಣೆ ಕುರಿತಂತೆ ಈ ಕೆಳಕಂಡ ಆದೇಶಗಳನ್ನು ಹೊರಡಿಸಲು ಸರ್ಕಾರವು ಹರ್ಷಿಸುತ್ತದೆ.

**3. ಕನಿಷ್ಠ ನಿವೃತ್ತಿ ವೇತನ:**

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ಮತ್ತು ಕರ್ನಾಟಕ ನಾಗರೀಕ ಸೇವಾ(ಅಸಾಧಾರಣ ನಿವೃತ್ತಿ ವೇತನ) ನಿಯಮಾವಳಿಗಳು, 2003 ಅನ್ವಯ ಲಭ್ಯವಾಗುವ ಕೆಳಕಂಡ ವಿವಿಧ ಬಗೆಯ ನಿವೃತ್ತಿ ವೇತನಗಳ ಕನಿಷ್ಠ ಮೊತ್ತವನ್ನು ಮಾಹೆಯಾನ ರೂ.8,500/–ಗಳಿಗೆ ಹೆಚ್ಚಿಸತಕ್ಕದ್ದು.

ಅ) ವಯೋ ನಿವೃತ್ತಿ ವೇತನ

ಆ) ವಿಶ್ರಾಂತಿ ನಿವೃತ್ತಿ ವೇತನ

ಇ) ಅಶಕ್ತತಾ ನಿವೃತ್ತಿ ವೇತನ

ಈ) ಪರಿಹಾರ ನಿವೃತ್ತಿ ವೇತನ

ಉ) ಅನುಕಂಪ ಭತ್ಯೆ

**4. ಗರಿಷ್ಠ ನಿವೃತ್ತಿ ವೇತನ:**

4.1 ಮೇಲಿನ ಕಂಡಿಕೆ–3ರಲ್ಲಿ ಕಾಣಿಸಲಾಗಿರುವ ವಿವಿಧ ಬಗೆಯ ನಿವೃತ್ತಿ ವೇತನಗಳ ಗರಿಷ್ಠ ಮೊತ್ತದ ಪರಿಮಿತಿಯು ಮಾಹೆಯಾನ ರೂ.75,300/–ಗಳಿಗೆ ನಿಗದಿಪಡಿಸತಕ್ಕದ್ದು.

4.2 ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು ನಿಯಮ 210ರ ಅಡಿ ಮಂಜೂರು ಮಾಡಲಾಗುವ ತಾತ್ಪೂರ್ತಿಕ (ಅಡ್‌ಹಾಕ್) ನಿವೃತ್ತಿ ವೇತನ ಪ್ರಮಾಣವು ಅತ್ಯಂತ ಅಸಾಧಾರಣ ಸಂದರ್ಭಗಳನ್ನು ಹೊರತುಪಡಿಸಿ ಮಾಹೆಯಾನ ರೂ.8,500/–ಗಳನ್ನು ಮೀರಲಾಗತಕ್ಕದ್ದಲ್ಲ.

**5. ತುಟ್ಟಿ ಭತ್ಯೆ:**

ಸರ್ಕಾರಿ ನೌಕರರ ಪ್ರಕರಣಗಳಲ್ಲಿ ಅಳವಡಿಸಿಕೊಳ್ಳಲಾಗುವ ತುಟ್ಟಿಭತ್ಯೆಯ ಶೇಕಡಾವಾರು ಪ್ರಮಾಣವನ್ನೇ ಕುಟುಂಬ ಪಿಂಚಣಿದಾರರೂ ಸೇರಿದಂತೆ ನಿವೃತ್ತಿ ವೇತನದಾರರಿಗೂ ಮುಂದುವರಿಸಿ ಮಂಜೂರು ಮಾಡತಕ್ಕದ್ದು. ದಿನಾಂಕ:01.07.2017ರಂದು ಲಭ್ಯವಿದ್ದ ತುಟ್ಟಿಭತ್ಯೆಯನ್ನು ಪರಿಷ್ಕೃತ ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದಲ್ಲಿ ವಿಲೀನಗೊಳಿಸಿರುವುದರಿಂದ, ತುಟ್ಟಿಭತ್ಯೆಯ ಮೊದಲನೆಯ ಕಂತು ದಿನಾಂಕ:01.01.2018ರಂದು ಪ್ರಾಪ್ತವಾಗುತ್ತದೆ.

**6. ನಿವೃತ್ತಿ ಉಪದಾನ / ಮರಣ ಉಪದಾನ :**

6.1 ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ಅಡಿ ನಿವೃತ್ತಿ ಉಪದಾನ ಮೊತ್ತ ಸಂದಾಯವಾಗಬೇಕಾದ ಹತ್ತು ಆರು ಮಾಸಿಕ ಅವಧಿಗಳಿಗೆ ಕಡಿಮೆಯಿಲ್ಲದೆ ಅರ್ಹತಾದಾಯಕ

ಸೇವೆಯನ್ನು ಪೂರ್ಣಗೊಳಿಸಿರುವ ಸರ್ಕಾರಿ ನೌಕರನ ಪ್ರಕರಣದಲ್ಲಿ ಪೂರ್ಣಗೊಳಿಸಲಾದ ಪ್ರತಿ ಆರು ಮಾಸಿಕ ಅರ್ಹತಾ ಸೇವೆಗೆ ಉಪಲಬ್ಧಗಳ ಗರಿಷ್ಠ ಮಿತಿ 16 1/2 ಕ್ಕೆ ಸೀಮಿತಗೊಳಿಸಿ, ಉಪಲಬ್ಧಗಳ 1/4 ನೇ ಭಾಗಕ್ಕೆ ಸಮನಾಗತಕ್ಕದು. ಈ ರೀತಿ ಲೆಕ್ಕ ಹಾಕಲಾದ ನಿವೃತ್ತಿ ಉಪದಾನದ ಮೊತ್ತವು **ದಿನಾಂಕ: 01.04.2018 ರಂದು ಅಥವಾ ತದನಂತರ** ನಿವೃತ್ತರಾಗುವ ಸರ್ಕಾರಿ ನೌಕರರಿಗೆ ಗರಿಷ್ಠ ಮಿತಿ ರೂ.20.00 ಲಕ್ಷ ಗಳಿಗೊಳಪಟ್ಟಿರುತ್ತದೆ.

6.2 ದಿನಾಂಕ: 01.04.2018ರಂದು ಅಥವಾ ತದನಂತರ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ಸರ್ಕಾರಿ ನೌಕರನ ಸಂದರ್ಭದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ಅಡಿ ಲಭ್ಯವಿರುವ ಮರಣ ಉಪದಾನವು ಕೆಳಗೆ ಕಾಣಿಸಿದ ದರಗಳಲ್ಲಿರತಕ್ಕದ್ದು.

| ಅರ್ಹತಾ ಸೇವೆಯ ಅವಧಿ | ಉಪದಾನ ಪ್ರಮಾಣ |
|---|---|
| 1) 1 ವರ್ಷಕ್ಕಿಂತ ಕಡಿಮೆ | ಉಪಲಬ್ಧಗಳ ಎರಡರಷ್ಟು |
| 2) 1 ವರ್ಷಗಳಿಗಿಂತ ಹೆಚ್ಚು ಆದರೆ 5 ವರ್ಷಗಳಿಗಿಂತ ಕಡಿಮೆ | ಉಪಲಬ್ಧಗಳ ಆರರಷ್ಟು |
| 3) 5 ವರ್ಷಗಳಿಗಿಂತ ಹೆಚ್ಚು ಆದರೆ 20 ವರ್ಷಗಳಿಗಿಂತ ಕಡಿಮೆ | ಉಪಲಬ್ಧಗಳ ಹನ್ನೆರಡರಷ್ಟು |
| 4) 20 ವರ್ಷಗಳಿಗಿಂತ ಹೆಚ್ಚು | ಪೂರೈಸಿದ ಪ್ರತಿ ಅರ್ಧ ವರ್ಷದ ಅರ್ಹತಾ ಸೇವೆಗೆ ಉಪಲಬ್ಧಗಳ ಅರ್ಧದಷ್ಟು ಈ ರೀತಿ ದೊರೆಯುವ ಉಪದಾನವು ಗರಿಷ್ಠ ಮೊತ್ತ ಉಪಲಬ್ಧಗಳ 33 ಹಾಗೂ ಮರಣ ಉಪದಾನವು ಯಾವುದೇ ಕಾರಣಕ್ಕೂ ರೂ.20.00ಲಕ್ಷಗಳಿಗೆ ಮೀರತಕ್ಕದ್ದಲ್ಲ. |

**7. ಕುಟುಂಬ ನಿವೃತ್ತಿ ವೇತನ:**

7.1. ಸರ್ಕಾರಿ ನೌಕರನು ದಿನಾಂಕ:01.4.2018ರಂದು ಮತ್ತು ತದನಂತರ ಸೇವೆಯಲ್ಲಿರುವಾಗಲೇ ಮರಣ ಹೊಂದುವ, ನಿವೃತ್ತಿ ಹೊಂದುವ ಸರ್ಕಾರಿ ನೌಕರರಿಗೆ ಕರ್ನಾಟಕ ಸರ್ಕಾರಿ ನೌಕರರ (ಕುಟುಂಬ ಪಿಂಚಣಿ) ನಿಯಮಾವಳಿಗಳು, 2002ರನ್ವಯ ಲಭ್ಯವಾಗುವ ಕುಟುಂಬ ನಿವೃತ್ತಿ ವೇತನವು ಉಪಲಬ್ಧಗಳ ಶೇ.30ರಷ್ಟು ಮಾಹೆಯಾನ ಕನಿಷ್ಠ ರೂ.8,500/- ಮತ್ತು ಗರಿಷ್ಠ ರೂ.45,180/-ಗಳ ಮಿತಿಗೆ ಒಳಪಟ್ಟಿರುತ್ತದೆ.

7.2 ತಂದೆ ತಾಯಿ ಇಬ್ಬರು ಸರ್ಕಾರಿ ನೌಕರರಾಗಿದ್ದು ದಿನಾಂಕ:01.04.2018ರ ದಿನಾಂಕದಂದು ಅಥವಾ ತದನಂತರ ಮೃತರಾದ ಪಕ್ಷದಲ್ಲಿ ಅಪ್ರಾಪ್ತ ಮಕ್ಕಳಿಗೆ ಕರ್ನಾಟಕ ಸರ್ಕಾರಿ ನೌಕರರ(ಕುಟುಂಬ ಪಿಂಚಣಿ) ನಿಯಮಾವಳಿಗಳು, 2002ರ ಅಡಿ ನೀಡುವ ಕುಟುಂಬ ಪಿಂಚಣಿಯು ಗರಿಷ್ಠ ಮಾಹೆಯಾನ ರೂ.45,180/-ಗಳಿಗೆ ಒಳಪಟ್ಟಿರತಕ್ಕದ್ದು.

**8. ಉಪಲಬ್ಧಗಳು:**

ವಿವಿಧ ನಿವೃತ್ತಿ ಮತ್ತು ಮರಣ ಸೌಲಭ್ಯಗಳು ಮತ್ತು ಕುಟುಂಬ ನಿವೃತ್ತಿ ವೇತನಗಳನ್ನು ಲೆಕ್ಕ ಹಾಕುವುದಕ್ಕಾಗಿ, ಉಪಲಬ್ಧ ಪದಕ್ಕೆ ಸರ್ಕಾರಿ ನೌಕರನು ತನ್ನ ನಿವೃತ್ತಿ/ಮರಣ ಸಮಯದಲ್ಲಿ ಹೊಂದಿದ್ದ ಹುದ್ದೆಗೆ ಅನ್ವಯಿಸಲಾಗಿದ್ದ ವೇತನ ಶ್ರೇಣಿಯ ಮೂಲ ವೇತನ ಅಲ್ಲದೆ ಕೆಳಕಂಡ (ಅ) ರಿಂದ (ಇ)ಗಳನ್ನು ಸೇರಿಸಿ ಅರ್ಥೈಸಿಕೊಳ್ಳತಕ್ಕದ್ದು.

(ಅ) ಗರಿಷ್ಠ ವೇತನ ಶ್ರೇಣಿಗೂ ಮೀರಿ, ಸ್ಥಗಿತ ವೇತನ ಬಡ್ತಿ ನೀಡಲಾಗಿದ್ದಲ್ಲಿ ಅದು.

(ಆ) ಕರ್ನಾಟಕ ನಾಗರೀಕ ಸೇವೆಗಳು (ಪರಿಷ್ಕೃತ ವೇತನ) ನಿಯಮಾವಳಿಗಳು 2018ರ ನಿಯಮ 7ರ ಉಪನಿಯಮ (3)ರ ಅಡಿ ವೈಯಕ್ತಿಕ ವೇತನ ನೀಡಲಾಗಿದ್ದಲ್ಲಿ ಅದು.

(ಇ) ಪ್ರಸಕ್ತ ಶ್ರೇಣಿಯ ಗರಿಷ್ಠ ವೇತನಕ್ಕಿಂತ ಹೆಚ್ಚಿಗೆಯಾಗಿ 20, 25 ಮತ್ತು 30 ವರ್ಷಗಳ ಸೇವೆಗೆ ನೀಡಲಾದ ಹೆಚ್ಚುವರಿ ವೇತನ ಬಡ್ತಿ.

**9. ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನ ಪರಿಷ್ಕರಣೆ:**

9.1 ದಿನಾಂಕ:01.07.2017ಕ್ಕೆ ಪೂರ್ವದಲ್ಲಿ ನಿವೃತ್ತರಾದ ಅಥವಾ ಸೇವೆಯಲ್ಲಿದ್ದಾಗ ಮೃತರಾದ ಸರ್ಕಾರಿ ನೌಕರರ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನವನ್ನು ಈ ಕೆಳಗಿನಂತೆ ನಿಗದಿಪಡಿಸತಕ್ಕದ್ದು:

(ಅ) ದಿನಾಂಕ:01.07.2017ರಂದು ಇದ್ದ ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನ.

(ಆ) ದಿನಾಂಕ: 01.07.2017 ರಂದು ಇದ್ದಂತಹ ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಮೇಲಿನ ಶೇಕಡ 45.25ರಷ್ಟು ತುಟ್ಟಿಭತ್ಯೆ.

(ಇ) ದಿನಾಂಕ:01.07.2017ರಂದು ಇದ್ದ ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇಕಡ. 30ರಷ್ಟು.

ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನವನ್ನು ಮೇಲಿನ (ಅ) + (ಆ) + (ಇ) ಒಟ್ಟು ಮೊತ್ತದಂತೆ ಮಾಹೆಯಾನ ರೂ.8,500/–ಗಳಿಗೆ ಕಡಿಮೆ ಇಲ್ಲದಂತೆ ಮತ್ತು ನಿವೃತ್ತಿ ವೇತನವನ್ನು ಗರಿಷ್ಠ ಮಾಹೆಯಾನ ರೂ.75,300/– ಮಿತಿಗೆ ಒಳಪಟ್ಟು ನಿರ್ಧರಿಸತಕ್ಕದ್ದು ಹಾಗೂ ಕುಟುಂಬ ನಿವೃತ್ತಿ ವೇತನದ ಗರಿಷ್ಠ ಮೊತ್ತವು ಮಾಹೆಯಾನ ರೂ.45,180/– ಮಿತಿಗೆ ಒಳಪಟ್ಟಿರುತ್ತದೆ.

9.2 ಕುಟುಂಬ ಒಂದರಲ್ಲಿ ಇಬ್ಬರು ಅಥವಾ ಹೆಚ್ಚು ಸದಸ್ಯರಿಗೆ ಕುಟುಂಬ ನಿವೃತ್ತಿ ವೇತನ ಮಂಜೂರು ಆಗಿದ್ದಲ್ಲಿ, ಈ ಆದೇಶದನ್ವಯ ಆಗಬೇಕಾದ ಹೆಚ್ಚಳವನ್ನು ಪ್ರತಿ ಸ್ವೀಕೃತನ ಪಾಲಿಗೆ ಅನ್ವಯಿಸುವಂತೆ ನಿರ್ಧರಿಸತಕ್ಕದ್ದು. ಒಟ್ಟು ಕುಟುಂಬ ನಿವೃತ್ತಿ ವೇತನವನ್ನು ಮೇಲ್ಕಾಣಿಸಿದ ಸೂಚನೆಗಳನ್ವಯ ಕ್ರೋಢೀಕರಿಸತಕ್ಕದ್ದು. ಎಲ್ಲಾ ಪಾಲು ಒಂದೇ ಖಜಾನೆಯಿಂದ ಪಡೆಯಲಾಗುತ್ತಿದ್ದಲ್ಲಿ ಪಾಲುಗಳ ಕ್ರೋಢೀಕರಣ ಮತ್ತು ನಿರ್ಧರಣೆಗಳನ್ನು ಖಜಾನಾಧಿಕಾರಿಯೇ ಲೆಕ್ಕಾಚಾರ ಮಾಡತಕ್ಕದ್ದು. ಪಾಲುಗಳು ಬೇರೆ ಬೇರೆ ಖಜಾನೆಗಳಿಂದ ಪಡೆಯಲಾಗುತ್ತಿದ್ದಲ್ಲಿ ಮಹಾಲೇಖಪಾಲರೊಂದಿಗೆ ಸಮಾಲೋಚಿಸಿ ನಿರ್ಧರಿಸತಕ್ಕದ್ದು.

9.3 ದಿನಾಂಕ:01.07.2017ಕ್ಕೂ ಮುಂಚೆ ಸೇವೆಯಿಂದ ನಿವೃತ್ತರಾದ ಅಥವಾ ಸೇವಾವಧಿಯಲ್ಲಿರುವಾಗಲೇ ಮರಣ ಹೊಂದಿದ ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ಈ ಆದೇಶದಲ್ಲಿನ ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನದ ಹೆಚ್ಚಳವನ್ನು ಕಂಡಿಕೆ 9.2ರಡಿ ಒಳಪಡುವ ಪ್ರಕರಣಗಳನ್ನು ಹೊರತುಪಡಿಸಿ ನಿವೃತ್ತಿದಾರರಿಗೆ/ಕುಟುಂಬ ನಿವೃತ್ತಿದಾರರಿಗೆ ಮಹಾಲೇಖಪಾಲರಿಂದ ಯಾವುದೇ ಪ್ರಾಧಿಕರಣ ಪಡೆಯದೇ ಖಜಾನಾಧಿಕಾರಿಯೇ ಪಾವತಿಸತಕ್ಕದ್ದು.

**10. ಈ ಆದೇಶದಲ್ಲಿ ಮಂಜೂರಾತಿ ನೀಡಿರುವ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನವನ್ನು ಕೆಳಕಂಡ ಷರತ್ತುಗಳಿಗೊಳಪಟ್ಟು ಹೆಚ್ಚಿಸಲಾಗಿದೆ:**

10.1 ಅಸ್ತಿತ್ವದಲ್ಲಿರುವ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನ ಮತ್ತು ಈಗ ಹೆಚ್ಚಳದಿಂದ ಲಭ್ಯವಾಗುವ ನಿವೃತ್ತಿ ವೇತನ/ ಕುಟುಂಬ ನಿವೃತ್ತಿ ಸೇರಿಕೆಯಿಂದ ಅವಕಾಶ ಕಲ್ಪಿಸಲಾಗಿರುವ ಗರಿಷ್ಠ ಮಾಸಿಕ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಮೊತ್ತವು ಗರಿಷ್ಠ ವೇತನ ರೂ.75,300/ ಕುಟುಂಬ ನಿವೃತ್ತಿ ವೇತನ ರೂ. 45,180/–ಕ್ಕೆ ಒಳಪಟ್ಟಿರತಕ್ಕದ್ದು.

10.2 ನಿವೃತ್ತಿ ವೇತನ ಹೆಚ್ಚಳ ಬಾಕಿ ಇವುಗಳಿಗೆ ಅರ್ಹತೆ ಹೊಂದಿದ್ದ ಮರಣಿಸಿದ ನಿವೃತ್ತದಾರರ ಪ್ರಕರಣದಲ್ಲಿ ಕುಟುಂಬ ನಿವೃತ್ತಿ ವೇತನ ಪಡೆಯಲು ಅರ್ಹವುಳ್ಳ ವ್ಯಕ್ತಿಗಾಗಲೀ ಅಥವಾ ಅವರ ಕಾನೂನುಬದ್ಧ ವಾರಸುದಾರನಿಗಾಗಲೀ ಪಾವತಿ ಮಾಡತಕ್ಕದ್ದು ಮತ್ತು ಅಂತಹ ಪಾವತಿಗೆ ಕರ್ನಾಟಕ ಖಜಾನೆ ಸಂಹಿತೆಯಲ್ಲಿ ವಿಧಿಸಲಾದ ಕಾರ್ಯ ವಿಧಾನವನ್ನು ಅನುಸರಿಸತಕ್ಕದ್ದು.

**11.** ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು, ಕರ್ನಾಟಕ ನಾಗರೀಕ ಸೇವೆಗಳು (ಅಸಾಧಾರಣ ನಿವೃತ್ತಿ ವೇತನ) ನಿಯಮಗಳು 2003, ಕರ್ನಾಟಕ ಸರ್ಕಾರಿ ನೌಕರರ(ಕುಟುಂಬ ನಿವೃತ್ತಿ ವೇತನ) ನಿಯಮಗಳು, 2002 ಮತ್ತು ಈ ವಿಷಯದಲ್ಲಿ ಕಾಲಕಾಲಕ್ಕೆ ಹೊರಡಿಸಲಾದ ಇತರೆ ಆದೇಶಗಳ ಪ್ರಸ್ತುತ ಉಪಬಂಧಗಳು, ಮೇಲಿನ ವ್ಯಾಪ್ತಿಗೆ ಒಳಪಟ್ಟು ಮಾರ್ಪಾಟು ಆಗಿರುತ್ತವೆ. ನಿವೃತ್ತಿ ವೇತನ, ಉಪದಾನ, ಕುಟುಂಬ ನಿವೃತ್ತಿ ವೇತನ ಮತ್ತು ಪರಿವರ್ತಿತ ನಿವೃತ್ತಿ ವೇತನಗಳನ್ನು ಕ್ರಮಗೊಳಿಸುವ ಇತರೆ ನಿಯಮಗಳು, ಷರತ್ತುಗಳು ಮತ್ತು ಆದೇಶಗಳು ಮುಂದುವರೆಸಿ ಅನ್ವಯಿಸತಕ್ಕದ್ದು. ಕರ್ನಾಟಕ

ನಾಗರೀಕ ಸೇವಾ ನಿಯಮಾವಳಿಗಳು ಮತ್ತು ಇತರೆ ನಿಯಮಗಳಿಗೆ ಸೂಕ್ತ ತಿದ್ದುಪಡಿಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

**12. ಪರಿವರ್ತಿತ ನಿವೃತ್ತಿ ವೇತನವನ್ನು ಪೂರ್ವಸ್ಥಿತಿಗೆ ತರುವುದು:**

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 376ರ ಅಡಿ ಸರ್ಕಾರಿ ನೌಕರನು ತನ್ನ ನಿವೃತ್ತಿ ವೇತನದ ಒಂದು ಭಾಗವನ್ನು ಪರಿವರ್ತಿಸಿಕೊಂಡಿದ್ದ ಪಕ್ಷದಲ್ಲಿ, ಪರಿವರ್ತಿಸಲಾದ ದಿನಾಂಕದಿಂದ 15 ವರ್ಷಗಳ ನಂತರ ಅವನ ನಿವೃತ್ತಿ ವೇತನವು ಪೂರ್ವಸ್ಥಿತಿಗೆ ತರತಕ್ಕದ್ದು.

**13.** ಯು.ಜಿ.ಸಿ, ಎ.ಐ.ಸಿ.ಟಿ.ಇ ಮತ್ತು ಐ.ಸಿ.ಎ.ಆರ್ ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿದ್ದು, ನಿವೃತ್ತರಾದ ರಾಜ್ಯ ಸರ್ಕಾರಿ ನೌಕರರಿಗೆ ಮತ್ತು ಎನ್.ಜೆ.ಪಿ.ಸಿ. ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿದ್ದ ನಿವೃತ್ತ ನ್ಯಾಯಾಂಗ ಅಧಿಕಾರಿಗಳಿಗೆ ಈ ಆದೇಶವು ಅನ್ವಯಿಸತಕ್ಕದ್ದಲ್ಲ. ಈ ಕುರಿತು ಪ್ರತ್ಯೇಕವಾಗಿ ಆದೇಶವನ್ನು ಹೊರಡಿಸಲಾಗುವುದು.

**14.** ದಿನಾಂಕ:01.04.2006ರಂದು ಅಥವಾ ತದನಂತರ ನೇಮಕಗೊಂಡ ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಯೋಜನೆಯ ವ್ಯಾಪ್ತಿಗೆ ಬರುವ ಸರ್ಕಾರಿ ನೌಕರರಿಗೆ ಈ ಆದೇಶವು ಅನ್ವಯಿಸತಕ್ಕದ್ದಲ್ಲ.

**15. ಆರ್ಥಿಕ ಸೌಲಭ್ಯಗಳು:**

ಪಿಂಚಣಿ ಪರಿಷ್ಕರಣೆಯ ಕಾರಣದಿಂದಾಗುವ ಹೆಚ್ಚಳವನ್ನು ದಿನಾಂಕ:01.04.2018 ರಿಂದ ನಗದಾಗಿ ಪಾವತಿ ಮಾಡತಕ್ಕದ್ದು. ದಿನಾಂಕ:01.07.2017 ರಿಂದ 31.3.2018ರ ಅವಧಿಯಲ್ಲಿ ಸೇವೆಯಿಂದ ನಿವೃತ್ತರಾದ ಅಥವಾ ಸೇವೆಯಲ್ಲಿರುವಾಗಲೇ ಮರಣ ಹೊಂದಿರುವ ಅಥವಾ ಸೇವೆಯಲ್ಲಿರುವುದು ಸಮಾಪ್ತಿಗೊಂಡ ಸರ್ಕಾರಿ ನೌಕರರ ಪ್ರಕರಣಗಳಲ್ಲಿ, ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ನಿಗದಿಪಡಿಸಲಾದ ಕಾಲ್ಪನಿಕ ವೇತನವನ್ನು ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನವನ್ನು ಲೆಕ್ಕ ಹಾಕುವ ಉದ್ದೇಶಗಳಿಗಾಗಿ ಪರಿಗಣನೆಗೆ ತೆಗೆದುಕೊಳ್ಳಲಾಗುವುದು. **ಆದರೆ, ನಿವೃತ್ತಿ ಹೊಂದಿದ ಸರ್ಕಾರಿ ನೌಕರನಿಗೆ ಅಥವಾ ಮರಣ ಹೊಂದಿದ ಸರ್ಕಾರಿ ನೌಕರನ ಫಲಾನುಭವಿಗೆ ಹಣಕಾಸಿನ ಪ್ರಯೋಜನವು ದಿನಾಂಕ:01.04.2018ರಿಂದ ಪ್ರಾಪ್ತವಾಗತಕ್ಕದ್ದು.**

**ದಿನಾಂಕ: 01.07.2017ಕ್ಕೂ ಮುಂಚೆ ಸೇವೆಯಿಂದ ನಿವೃತ್ತರಾದ ಅಥವಾ ಸೇವಾವಧಿಯಲ್ಲಿರುವಾಗಲೇ ಮರಣ ಹೊಂದಿದ ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ 01.07.2017ರಿಂದ ಲಭ್ಯವಾಗುವ ಪರಿಷ್ಕೃತ ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನ ದರಗಳನ್ನು ಈ ಆದೇಶದ ಅನುಬಂಧದಲ್ಲಿ ವಿವರಿಸಲಾಗಿದೆ.**

**16.** ಈ ಆದೇಶವನ್ನು ಜಾರಿಗೊಳಿಸುವುದರಲ್ಲಿ ಯಾವುದೇ ತೊಂದರೆಗಳು ಉದ್ಭವಿಸಿದಲ್ಲಿ ಅದನ್ನು ಪರಿಶೀಲಿಸಲು ಮತ್ತು ಅಗತ್ಯ ಪರಿಹಾರ ಕ್ರಮ ಕೈಗೊಳ್ಳಲು ಆರ್ಥಿಕ ಇಲಾಖೆಯ ಉಪ ಕಾರ್ಯದರ್ಶಿ(ವಿಶ್ರಾಂತಿ ವೇತನ) ಇವರಿಗೆ ಕಳುಹಿಸಬಹುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Ekroop Caur

**ಡಾ. ಏಕ್‌ರೂಪ್ ಕೌರ್**
ಸರ್ಕಾರದ ಕಾರ್ಯದರ್ಶಿ (ವೆಚ್ಚ)
ಆರ್ಥಿಕ ಇಲಾಖೆ

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಂತರ್ಜಾಲತಾಣ:
www.finance.kar.nic.in ವೀಕ್ಷಿಸಿ

# PROCEEDINGS OF THE GOVERNMENT OF KARNATAKA

## Sub:- Revision of Pensionary Benefits

### GOVERNMENT ORDER NO. FD 33 PEN 2018, BENGALURU, DATED: 24.04.2018

The 6th State Pay Commission constituted vide Government Order No.FD 22 SRP 2017 dated 01.06.2017 has submitted its report on 31.01.2018.

**2.** Government have accepted the recommendations of the 6th State Pay Commission in G.O.No. FD 06 SRP 2018 dtd:01.03.2018 and are now pleased to issue the following orders regarding revision of pensionary benefits.

**3. Minimum Pension :**

The Minimum amount of the following kinds of pension admissible under the Karnataka Civil Services Rules and the Extraordinary Pension admissible under the Karnataka Civil Services ( Extraordinary Pension) Rules, 2003 shall be enhanced to Rs. 8,500/- per month.

(i) Superannuation Pension
(ii) Retiring Pension
(iii) Invalid Pension
(iv) Compensation Pension
(v) Compassionate Allowance

**4. Maximum Pension :**

4.1 The ceiling on the maximum amount of various kinds of Pension mentioned in para 3 above shall be fixed at Rs.75,300/- per month.

4.2 The quantum of adhoc pension that may be sanctioned under Rule 210 of the Karnataka Civil Services Rules, shall not, save in the most exceptional circumstances, exceed Rs.8,500/- per month.

**5. Dearness Allowance :**

The pensioners including holders of family pension shall continue to be granted Dearness Allowance at the same percentage as is adopted in the case of Government Servants. Since the Dearness Allowance admissible as on 01.07.2017 is merged with the basic pension/family pension, the first installment of DA will be due from 01.01.2018.

**6. Retirement gratuity /Death gratuity :**

6.1. In the case of a Government Servant who has completed not less than ten six monthly periods of qualifying service the amount of retirement gratuity payable under the Karnataka Civil Service Rules shall be equal to 1/4th of the emoluments for each completed six monthly period of qualifying

service, subject to a maximum of 16 1/2 times the emoluments. The amount of retirement gratuity thus calculated shall be subject to a maximum of Rs.20.00 lakhs to the Government Servants who retire on or after 01.04.2018.

6.2. In the event of death of a Government Servant while in the service on or after 01.04.2018 the death gratuity shall be admissible under Karnataka Civil Services Rules at the following rates.

| Length of qualifying Service | Rate of gratuity |
|---|---|
| (1) Less than one year | Two times of emoluments |
| (2) One year or more but less than 5 years | Six times of emoluments |
| (3) Five years or more but less than 20 years | Twelve times of emoluments |
| (4) 20 years or more | Half of emoluments for every completed six monthly period of qualifying service subject to maximum of 33 times of emoluments provided that the amount of death gratuity shall not exceed Rs.20.00 lakhs. |

**7. Family Pension:**

7.1 The rates of family pension admissible as per Karnataka Government Servants (Family Pension) Rules, 2002 shall be 30% of the emoluments subject to minimum of Rs.8,500/- and maximum of Rs.45,180/- per month in respect of Government Servants who dies while in service or retires on or after 01.04.2018.

7.2 In the event of death on or after 01.04. 2018 of both father and mother who are Government Servants, the family pension payable to minor children under the Karnataka Government Servants (Family Pension) Rules, 2002 shall be subject to a maximum of Rs.45,180/- per month.

**8. Emoluments :**

The term emoluments for purpose of calculating various retirement and death benefits and family pension shall mean the basic pay drawn by a Government Servant in the scale of pay applicable to the post held by him on the date of retirement/ death shall also include:

(a) Stagnation increment, if any, granted to him above the maximum of the scale of pay.

(b) Personal pay, if any , granted to him under the sub-rule 3 of Rule 7 of the Karnataka Civil Services ( Revised Pay) Rules, 2018.

(c) Additional increments granted beyond the maximum of the time scale of pay for 20, 25 and 30 years of service.

**9. Revised Pension and Family Pension:**

9.1 The revised pension and family pension of state Government servants who have retired or died while in service prior to 01.07.2017 shall be as follows:-

(i) Basic Pension / Family Pension as on 01.07.2017.

(ii) Dearness Allowance of 45.25% of Basic Pension / Family Pension as on 01.07.2017

(iii) 30% of Basic Pension/Family Pension as on 01.07.2017.

The total of (i) + (ii) + (iii) above will be subject to a minimum of Rs.8,500/- per month for pension/family pension and maximum of Rs.75,300/- per month in respect of pension and Rs.45,180/- per month in respect of family pension.

9.2 Where family pension is sanctioned to two or more members of a family, increase under these orders shall be determined with reference to the share of each recipient. The total family pension should be consolidated as per the above guidelines. Wherever all the shares are being drawn in the same Treasury, the consolidation and determination of shares shall be calculated and arrived at by the Treasury Officer himself. Wherever those shares are being drawn in different treasuries, the Accountant General should be consulted in the matter.

9.3 The increase in pension/family pension in respect of pensioners/ family pensioners who have retired or died while in service prior to 01.07.2017 under this order shall be paid to the pensioners/ family pension holders by the treasury officers without any authorization from the Accountant General, subject to cases falling under para 9.2.

**10. The increase in pension or family pension sanctioned in this order shall be subject to the following conditions:**

10.1 In case of increase in pension/family pension now admissible together with existing pension/family pension results in monthly pension/family pension exceeding the maximum pension /family pension allowed, the total shall be restricted to the maximum pension of Rs.75,300 and maximum of family pension of Rs.45,180/.

10.2 In case of death of a pensioner who was entitled to the increase in pension, arrears, if any, shall be paid to the persons entitled to receive family pension or to their legal heirs and for such payment prescribed in the Karnataka Treasury Code shall be followed.

**11.** The existing provisions in the Karnataka Civil Services Rules (Extraordinary Pension) Rules, 2003, Karnataka Government Servants (Family Pension) Rules, 2002 and other orders issued on the subject from time to time stand modified to the above extent. The other rules,

O 013-2

conditions and orders regulating pension, gratuity, family pension and commutation of pension shall continue to apply. Necessary amendments to the Karnataka Civil Services Rules and other Rules will be issued separately.

12. **Restoration of commuted portion of Pension:**

In the case of Government Servant who commutes a portion of a pension under Rule 376 of the Karnataka Civil Services Rules, the commuted portion of his pension shall be restored after 15 years from the date of commutation.

13. These orders are not applicable to the retired State Government Employees on UGC, AICTE and ICAR scales of pay and retired Judicial Officers on NJPC scales of pay. Separate Orders shall be issued in this regard.

14. These orders are not applicable to the Government Servants who are appointed under New Defined Contributory Pension Scheme on or after 01.04.2006.

15. **Monetary Benefits:**

The increase on account of revision of pension/family pension shall be payable in cash from 01.04. 2018. In cases where a Government servant has retired from service or died while in service or ceased to be in service during the period between 01.07.2017 and 31.03.2018, his pay fixed notionally in the revised scale of pay shall be taken into account for the purpose of calculation of pension/family pension. **The monetary benefit shall, however, accrue to the retired Government servant or the beneficiary of the deceased Government servant with effect from 01.04.2018**.

**The revised basic pension and family pension admissible to the Government Servants who have retired or died while in service prior to 01.07.2017 is shown in the Annexure to this Order.**

16. Any difficulty encountered in the implementation of this order may be referred to Deputy Secretary to Government (Pension) in Finance Department for examination and necessary remedial action.

By Order and in the name of the
Governor of Karnataka

Ekroop Caur

**DR. EKROOP CAUR**
Secretary to Government (Expenditure)
Finance Department

**Visit:www.finance.kar.nic.in**

O 013-2*